| ವಿಧ | ಶಿಕ್ಷಣ ಸಂಸ್ಥೆಗಳ ಮೂಲಕ | ಬೆಂ.ಮ.ಸಾ.ಸಂಸ್ಥೆಯ ಇ–ಫಾರಂ ಮೂಲಕ |
|---|---|---|
| ಕಾಲೇಜು. | ಅನ್ವಯಿಸುವುದಿಲ್ಲ. | ಮೊಬೈಲ್‌ನಲ್ಲಿ ಐ.ವಿ.ಆರ್. ಮೂಲಕ<br>• **ಮೊಬೈಲ್‌ನಲ್ಲಿ 161 ಕರೆ ಮಾಡುವುದು.**<br>• **ಕನ್ನಡ ಅಥವಾ ಇಂಗ್ಲೀಷ್ ಆಯ್ಕೆ ಮಾಡಿಕೊಳ್ಳುವುದು.**<br>• **ಬೆಂ.ಮ.ಸಾ.ಸಂಸ್ಥೆಯ ಸೇವೆಗಳಿಗೆ 6 ನ್ನು ಆಯ್ಕೆ ಮಾಡಿಕೊಳ್ಳುವುದು.**<br>• **ವಿದ್ಯಾರ್ಥಿ ಪಾಸಿಗಾಗಿ 2 ನ್ನು ಆಯ್ಕೆ ಮಾಡಿಕೊಳ್ಳುವುದು.**<br>• **ವೆಬ್‌ಲಿಂಕ್ ಮೂಲಕ ವಿದ್ಯಾರ್ಥಿ ರಿಯಾಯಿತಿ ಪಾಸಿನ ಅರ್ಜಿಯನ್ನು ವಿದ್ಯಾರ್ಥಿಯ ಮೊಬೈಲ್‌ಗೆ ರವಾನಿಸಲಾಗುವುದು.**<br><br>ನೇರವಾಗಿ ವೆಬ್‌ಲಿಂಕ್ ಮೂಲಕ:<br>• ಪರ್ಯಾಯವಾಗಿ, ವಿದ್ಯಾರ್ಥಿಗಳು www.mybmtc.com ಗೆ ತೆರಳಿ ವೆಬ್‌ಲಿಂಕ್ ಮೂಲಕವು ಅರ್ಜಿಯನ್ನು ಸಲ್ಲಿಸಬಹುದಾಗಿದೆ.<br>ಅರ್ಜಿ ಸಲ್ಲಿಸುವ ಪ್ರಕ್ರಿಯೆ:<br>• ವಿದ್ಯಾರ್ಥಿಗಳು ವೆಬ್‌ಲಿಂಕ್‌ನಲ್ಲಿ ವಿದ್ಯಾರ್ಥಿ ಪಾಸಿನ ಅರ್ಜಿಯನ್ನು ಪಡೆಯುವುದು.<br>• ಸದರಿ ಇ–ಫಾರಂ ನ್ನು ವಿದ್ಯಾರ್ಥಿಗಳು ಎನ್‌ರೋಲ್‌ಮೆಂಟ್ ಸಂಖ್ಯೆಯನ್ನು, ಹುಟ್ಟಿದ ದಿನಾಂಕ, ವಿದ್ಯಾರ್ಥಿಯ ಹೆಸರು, ಲಿಂಗ, ತರಗತಿ, ವಿಳಾಸ, ಕಾಲೇಜು ವಿವರ, ದೂರವಾಣಿ ಸಂಖ್ಯೆ, ಇ–ಮೇಲ್ ವಿಳಾಸ, ಪ್ರಯಾಣದ ವಿವರ ಹಾಗೂ ಭಾವಚಿತ್ರವನ್ನು ಅಪ್‌ಲೋಡ್ ಮಾಡಿ ಸಲ್ಲಿಸುವುದು.<br>• ಭರ್ತಿ ಮಾಡಿದ ಅರ್ಜಿಯನ್ನು ಸಂಬಂಧಿಸಿದ ಕಾಲೇಜಿಗೆ ರವಾನಿಸಲಾಗುವುದು.<br>• ವಿದ್ಯಾರ್ಥಿಗಳು ಸಲ್ಲಿಸಿದ ಅರ್ಜಿಯನ್ನು ದೃಢೀಕರಿಸಲು ಕಾಲೇಜುಗಳಿಗೆ ಯುಸರ್‌ನೇಮ್ ಮತ್ತು ಪಾಸ್‌ವರ್ಡ್‌ನ್ನು ನೀಡಲಾಗುವುದು.<br>• ಕಾಲೇಜಿನ ನೋಡಲ್ ಅಧಿಕಾರಿಯು ಕಡ್ಡಾಯವಾಗಿ ಅರ್ಜಿಯನ್ನು ಪರಿಶೀಲಿಸಿ ದೃಢೀಕರಿಸಿ ಸಲ್ಲಿಸುವುದು.<br>ಪಾಸಿನ ಶುಲ್ಕ:<br>• ವಿದ್ಯಾರ್ಥಿಗಳು ಅನ್ವಯವಾಗುವ ಪಾಸಿನ ಮೊತ್ತ ಮತ್ತು ಸೇವಾ ಶುಲ್ಕವನ್ನು ಪಾವತಿಸುವುದು.<br>• ಪಾಸಿನ ಮೊತ್ತವನ್ನು ಪಾವತಿಸಲು ಆನ್‌ಲೈನ್‌ನಲ್ಲಿ ಅಥವಾ ಸ್ಮಾರ್ಟ್‌ಕಾರ್ಡ್ ವಿತರಣಾ ಸಂಧರ್ಭದಲ್ಲಿ ಅಂಚೆ ವ್ಯಕ್ತಿಯ ಬಳಿ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ.<br>• ಆನ್‌ಲೈನ್ ಮೂಲಕ ಪಾಸಿನ ಮೊತ್ತವನ್ನು ಪಾವತಿಸಿದ್ದಲ್ಲಿ ರೂ.190/– |

| | | |
|---|---|---|
| | | ನ್ನು ಸೇವಾ ಶುಲ್ಕವಾಗಿ ಅಥವಾ ಅಂಚೆ ವ್ಯಕ್ತಿಯ ಬಳಿ ಪಾವತಿಸಿದಲ್ಲಿ ರೂ.200/- ನ್ನು ಸೇವಾ ಶುಲ್ಕವಾಗಿ ಪಾವತಿಸುವುದು.<br><br>ವಿತರಣೆ:<br>• ಸ್ಮಾರ್ಟ್‌ಕಾರ್ಡ್‌ಗಳನ್ನು ವಿದ್ಯಾರ್ಥಿಯ ವಿಳಾಸಕ್ಕೆ ಅಂಚೆಯ ಮೂಲಕ ರವಾನಿಸಲಾಗುವುದು.<br>• ಪಾಸಿನ ಮೊತ್ತವನ್ನು ನಗದಾಗಿ ಪಾವತಿಸುವವರು ಸ್ಮಾರ್ಟ್‌ಕಾರ್ಡ್ ಸ್ವೀಕರಿಸುವ ಸಂಧರ್ಭದಲ್ಲಿ ಅಂಚೆ ವ್ಯಕ್ತಿಯ ಬಳಿ ಪಾವತಿಸುವುದು. |